### ಹೊಲಿ ನಿನ್ನ ತುಟಿಗಳನು

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ

ಭೂಮಿಯಲ್ಲಿ ಬಿತ್ತಿದ ಬೀಜದಿಂದ ಮೊಳಕೆ ಒಡೆದು ಸಸಿಯೊಂದು ಮೂಡಿ ಬರುವಾಗ, ತಮಟೆ ಬಾರಿಸಿಕೊಂಡು ಬರುವುದಿಲ್ಲ. ಒಂದು ಗಿಡದಲ್ಲಿ ಹಣ್ಣು ಪಕ್ವವಾದಾಗ (ಮಾಗುವಂದು), ತುತ್ತೂರಿ ದನಿ ಇರುವುದಿಲ್ಲ. "ನಾನು ಹಣ್ಣಾಗಿದ್ದೇನೆ, ರಸಭರಿತವಾಗಿದ್ದೇನೆ" ಎಂದು ಅದು ಕೂಗುವುದಿಲ್ಲ. ನಮಗೆ ಬೆಳಕು ಮತ್ತು ಎಲ್ಲ ರೀತಿಯ ಶಕ್ತಿಗಳನ್ನೂ ನೀಡುವ ಸೂರ್ಯ ಮತ್ತು ಚಂದ್ರರೆಂಬ ಆಕಾಶಕಾಯಗಳು ಒಂದು ಚೂರೂ ಸದ್ದು ಮಾಡುವುದಿಲ್ಲ.

ಪ್ರಕೃತಿಯಲ್ಲಿ ಕ್ಷಣಕ್ಷಣವೂ, ಪ್ರತಿನಿತ್ಯವೂ ನಡೆಯುವ ಜನೋಪಕಾರಿಯಾದ, ಪ್ರತಿಫಲಾಪೇಕ್ಷೆಯಿಲ್ಲದ, ಧನ್ಯವಾದವನ್ನು ನಿರೀಕ್ಷಿಸದ, ಚಟುವಟಿಕೆಗಳು ನಮಗೆ ಆದರ್ಶವಾಗಿವೆ. ನಾವು ಆಗಾಗ್ಗೆ, ಅಲ್ಲಲ್ಲಿ ಮಾಡುವ ಸ್ವಾರ್ಥಪರವಾದ ಕೆಲಸಗಳ ಬಗ್ಗೆ ನಾವೇ ಘೋಷಣೆ ಮಾಡಿಕೊಳ್ಳುತ್ತೇವೆ. "ನನ್ನಿಂದಲೇ ಇಷ್ಟೆಲ್ಲಾ ನಡೆಯುತ್ತಿದೆ; ಏನೆಲ್ಲಾ ಮಾಡಿದ್ದೇನೆ" ಎಂದು ಕೂಗಾಡುತ್ತೇವೆ, ಹಾರಾಡುತ್ತೇವೆ, ಅಹಂಕಾರಪಡುತ್ತೇವೆ. ಇದಾವುದೂ ಸರಿಯಲ್ಲ. ಅಹಂಕಾರದ ಮಾತುಗಳನ್ನು ಆಡದಂತೆ, ನಿನ್ನ ತುಟಿಗಳನ್ನು ಹೊಲಿದುಕೊಂಡಿರು ಎನ್ನುತ್ತಾರೆ ಡಿ.ವಿ.ಜಿ.

### ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ
ಹೊರಡು ಕರೆ ಬರಲ್ ಅಳದೆ – ಮಂಕುತಿಮ್ಮ

ನಮಗಿರುವ, ನಾವು ಮಾಡಬೇಕಾಗಿರುವ ಯಾವ ಕೆಲಸವನ್ನೂ, 'ಕಿರಿದಾಗಿದೆ, ಸಣ್ಣದಾದ ಕೆಲಸ' ಎಂದು ಭಾವಿಸದೆ, ಮನಸ್ಸಿಟ್ಟು, ಅದನ್ನೇ ಚೆನ್ನಾಗಿ ಮಾಡಬೇಕು. ಅವರವರ ಸ್ಥಾನದಲ್ಲಿ ಕೆಲಸ ಮಾಡುವ ಕ್ಷೇತ್ರದಲ್ಲಿ ಅವರವರೇ ದೊಡ್ಡವರು. "ಒಂದು ಘಂಟೆಯ ಅವಧಿಯಲ್ಲಿ ಸುಂದರವಾದ ಒಂದು ಜೋಡಿ ಚಪ್ಪಲಿಗಳನ್ನು ಹೊಲಿಯುವ ಚಮ್ಮಾರನು, ಅದೇ ಅವಧಿಯಲ್ಲಿ ನಿರರ್ಥಕವಾದ ಮಾತುಗಳನ್ನಾಡುವ ಒಬ್ಬ ವಿದ್ವಾಂಸನಿಗಿಂತ ಶ್ರೇಷ್ಠ" ಎಂದು ಎಚ್ಚರಿಸಿದ್ದಾರೆ, ಸ್ವಾಮಿ ವಿವೇಕಾನಂದರು. ಕರ್ಮದ ಫಲವಾಗಿ ಬಂದದ್ದನ್ನು ಗೊಣಗಾಟ ಮಾಡದೆ 'ಪ್ರಸಾದ' ಎಂದು ಅನುಭವಿಸಬೇಕು. ಲೋಕದ ಹಾಗೂ ಸಂಸಾರದ ಹೊರೆಯನ್ನು ಹೊತ್ತು ಸಾಗಬೇಕು. ಅದರ ಜೊತೆಯಲ್ಲಿ, ಪರಮಾರ್ಥವನ್ನು, ಪರತತ್ತ್ವವನ್ನು ಕಾಣುವ, ಮೋಕ್ಷವನ್ನು ಪಡೆಯುವ ಅಂತಿಮ ಗುರಿಯನ್ನು ಬಿಡದಂತೆ ಎಚ್ಚರವಹಿಸಬೇಕು. ಧರ್ಮದ ಚೌಕಟ್ಟಿನೊಳಗೆ ಅರ್ಥ, ಕಾಮಗಳು ಇರುವಂತೆ, ಕರ್ಮನಿರತನಾಗಿರಬೇಕು. ನಮ್ಮ ಅಂತ್ಯಕಾಲ ಸಮೀಪಿಸಿದಂತೆ, ಆಟ ಮುಗಿಸಲು ಕರೆ ಬಂದಂತೆ, ಅಳದೆ, ಲೋಕದಿಂದ ಹೊರಡಬೇಕು (ಸಾವು).

### ಶರಣು ವಿಶ್ವಾತ್ಮನಲಿ

ಶರಣುವೊಗು ಜೀವನ ರಹಸ್ಯದಲಿ ಸತ್ತ್ವದಲಿ
ಶರಣು ಜೀವನವ ಸುಮವೆನಿಪ ಯತ್ನದಲಿ
ಶರಣಂತರಾತ್ಮ ಗಂಭೀರ ಪ್ರಶಾಂತಿಯಲಿ
ಶರಣು ವಿಶ್ವಾತ್ಮನಲಿ – ಮಂಕುತಿಮ್ಮ

ಜೀವನದ, ಸೃಷ್ಟಿಯ ರಹಸ್ಯಕ್ಕೆ ಹಾಗೂ ಇದರೊಳಗಿನ ಚೈತನ್ಯಕ್ಕೆ ನಾವು ಶರಣಾಗಬೇಕು ಮತ್ತು ಗೌರವದಿಂದ ನಮಸ್ಕರಿಸಬೇಕು. ಜೀವನವನ್ನು ಹಾಗೂ ಸಾರ್ವಜನಿಕರ ಬದುಕನ್ನು ಸುಖವಾಗಿಸುವ ಮನುಷ್ಯನ ಎಲ್ಲಾ ಯತ್ನಗಳಿಗೂ (ವಾಹನ ಸೌಕರ್ಯ, ಆರೋಗ್ಯ, ನೀರು, ಶಕ್ತಿ, ವಿದ್ಯೆ, ವ್ಯಾಪಾರೀಕರಣ ಇತ್ಯಾದಿ) ನಮಸ್ಕರಿಸಬೇಕು. ಅಂತೆಯೇ, ಪ್ರತಿಯೊಂದು ಜೀವಿಯ ಅಂತರಂಗದಲ್ಲಿ ಗಂಭೀರವಾಗಿ, ಪ್ರಶಾಂತವಾಗಿ ನೆಲೆಗೊಂಡಿರುವ ಅಂತರಾತ್ಮನಿಗೆ ಪ್ರಣಾಮಗಳನ್ನು ಸಲ್ಲಿಸಬೇಕು. ಇಡೀ ವಿಶ್ವದ ಅನಂತ ಅಖಂಡ ಶಕ್ತಿಸ್ವರೂಪನಾದ ವಿಶ್ವಾತ್ಮ, ಅಂದರೆ, ಪರಮಾತ್ಮನಿಗೆ ಮತ್ತೆ ಮತ್ತೆ ಶರಣಾಗೋಣ.

•

# ಮಂಕುತಿಮ್ಮನ ಕಗ್ಗದಲ್ಲಿ ನೈತಿಕತೆ

ಮಂಕುತಿಮ್ಮನ ಕಗ್ಗ

ಎಸ್. ಶ್ರೀನಿವಾಸ ಶೆಟ್ಟಿ

**ಮಂ**ಕುತಿಮ್ಮನ ಕಗ್ಗ ಡಿ.ವಿ.ಜಿ.ಯವರ ಮೇರು ಕೃತಿ, ಮುಕ್ತಕಗಳ ಸುಂದರಮಾಲೆಯಾಗಿರುವ ಇದು ಕನ್ನಡದ ಭಗವದ್ಗೀತೆ, ಕನ್ನಡದ ಉಪನಿಷತ್ ಮುಂತಾದ ಹೆಗ್ಗಳಿಕೆಗಳಿಗೆ ಪಾತ್ರವಾಗಿದೆ. 'ಮಂಕುತಿಮ್ಮನ ಕಗ್ಗ' ವಿಶ್ವದ ನೀತಿ ಸಾಹಿತ್ಯಕ್ಕೆ ಕನ್ನಡದ ಕೊಡುಗೆ. "ತಮಿಳಿನ ತಿರುವಳ್ಳುವರ್, ತೆಲುಗಿನ ವೇಮನ, ಕನ್ನಡದ ಸರ್ವಜ್ಞ – ಈ ಮಹನೀಯರ ಸಾಲಿನಲ್ಲಿಯೇ ನಿಲ್ಲಬಲ್ಲವರು ಡಿ.ವಿ.ಜಿ." ಎಂಬ ಹಾ.ಮಾ. ನಾಯಕರ ನುಡಿಗಳು ಡಿ.ವಿ.ಜಿ.ಯವರ ಮತ್ತು ಮಂಕುತಿಮ್ಮನ ಕಗ್ಗದ ಸರ್ವಶ್ರೇಷ್ಠತೆಯನ್ನು ಸಾರಿಹೇಳುತ್ತವೆ. ಪ್ರೊ. ಎ. ಆರ್. ಕೃಷ್ಣಶಾಸ್ತ್ರೀ ಅವರಂತೂ "ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ಮಹಾಕಾವ್ಯಗಳ ರತ್ನಾವಳಿ–ಮಂಕುತಿಮ್ಮನ ಕಗ್ಗ; ಅದು ನಿಜವಾಗಿ ಕಗ್ಗವೂ ಅಲ್ಲ; ಹಗ್ಗವೂ ಅಲ್ಲ; ಸಗ್ಗ; ವೇದಾಂತ ಸಾರಸಂಗ್ರಹ, ವಿದ್ವತ್ ಸಾಧಕರೊಬ್ಬರ ಅನುಭವಾಮೃತ" ಎಂದು ಕೊಂಡಾಡಿದ್ದಾರೆ. ಈ ಕೃತಿಯಲ್ಲಿ ಭಗವದ್ಗೀತೆಯ ಸಾರ, ಉಪನಿಷತ್ತಿನ ಸಾರ, ಡಿ.ವಿ.ಜಿ.ಯವರ ವರ್ಣಮಯವಾದ ಸುದೀರ್ಘ ಜೀವನಾನುಭವದ ಸಾರ – ಇವುಗಳನ್ನು ಕನ್ನಡದ ಮೂಸೆಯಲ್ಲಿ ಎರಕಹೊಯ್ಯಲಾಗಿದೆ. ಈ ಕೃತಿಯಲ್ಲಿ ಹೊರಹೊಮ್ಮಿದ ತತ್ತ್ವದೃಷ್ಟಿಯ ಹರವು ಬಹುವಿಶಾಲವಾದದ್ದು, ವೈವಿಧ್ಯಮಯವಾದದ್ದು. ಇವುಗಳೆಲ್ಲವೂ ಸುಂದರ ಮುಕ್ತಕಗಳಾಗಿ ಅರಳಿ ನಿಂತಿವೆ. ಮಂಕುತಿಮ್ಮನ ಕಗ್ಗದಲ್ಲಿ ನೈತಿಕತೆಯನ್ನು ಅರಸುವುದು ಪ್ರಯಾಸದ ಕೆಲಸವೇನಲ್ಲ. ಏಕೆಂದರೆ ಎಲ್ಲ ಮುಕ್ತಕಗಳೂ ಒಂದಲ್ಲ ಒಂದು ತೆರದಲ್ಲಿ ನೀತಿಬೋಧಕ ಭಿತ್ತಿಗಳೇ ಆಗಿವೆ. ಆದರೂ ನನ್ನ ದೃಷ್ಟಿಯಲ್ಲಿ ಅತ್ಯಂತ ಪ್ರಮುಖವೆಂದೆನಿಸಿದ ಕೆಲವನ್ನು ಆಯ್ದು ನಿಮ್ಮ ಮುಂದೆ ಸಾದರಪಡಿಸುತ್ತಿದ್ದೇನೆ.

'ಮಂಕುತಿಮ್ಮ ಕಗ್ಗ' ವು ಜೀವನ ಪ್ರಧಾನವಾದುದು; ಇಲ್ಲಿ ಪರ ಲೋಕದ ಬಯಕೆಯು ಇಹ ಲೋಕದ ಯುಕ್ತ ಬಾಳುವೆಯ ಆಕಾಂಕ್ಷೆಯೊಡನೆ ಸಮರಸ ಗೊಂಡಿದೆ; ಅದಕ್ಕಾಗಿ ನೀತಿ, ನಿಯಮಗಳ ಚೌಕಟ್ಟನ್ನು ಅರ್ಥ ವತ್ತಾಗಿ ಅದು ಬಿಂಬಿಸುತ್ತದೆ. ಇದನ್ನು ಸ್ವಾರಸ್ಯವಾಗಿ ಬಣ್ಣಿಸಿರುವ ಮಾನ್ಯ ಲೇಖಕರು ಭಾರತೀಯ ಜೀವವಿಮಾ ನಿಗಮದ ಮಂಡ್ಯ ಶಾಖೆಯಲ್ಲಿ ಅಭಿವೃದ್ಧಿ ಅಧಿಕಾರಿಯಾಗಿದ್ದಾರೆ. ಇವರು ಪ್ರಸಿದ್ಧ ಭಾಷಣಕಾರರು ಹಾಗೂ ಬರಹಗಾರರು; ಅಲ್ಲದೆ ವ್ಯಕ್ತಿತ್ವ ವಿಕಸನದ ಮಾರ್ಗದರ್ಶಕರು ಮತ್ತು ಮಂಕುತಿಮ್ಮನ ಕಗ್ಗದ ಮೇಲೆ ಸುಲಲಿತವಾಗಿ ಮಾತನಾಡ ಬಲ್ಲವರು. ಕಗ್ಗದ ಮೇಲಿನ ಅವರ ವಿವರಣೆ ಎರಡು ಸಂಪುಟಗಳಲ್ಲಿ ಪ್ರಕಟವಾಗಿದೆ.

## ಮಾನಸಲೋಕ

ಮನುಷ್ಯನ ಏಳುಬೀಳುಗಳಿಗೆ, ನೋವುನಲಿವುಗಳಿಗೆ ಆತನ ಮನಸ್ಸೇ ಕಾರಣ. ಮನಸ್ಸಿನ ಕುರಿತಾದ ಹಲವಾರು ಮುಕ್ತಕಗಳು ಮಂಕುತಿಮ್ಮನ ಕಗ್ಗದಲ್ಲಿದ್ದು ಅದನ್ನೊಂದು 'ಮಾನಸಲೋಕ'ವೆಂದೇ ಕರೆಯಬಹುದಾಗಿದೆ. ವಸ್ತುವಿಷಯಗಳನ್ನು ಬಯಸಿ ಬೆನ್ನಟ್ಟುವ ಮನಸ್ಸು ದಶದಿಕ್ಕುಗಳಿಗೆ ಹರಿದೋಡುತ್ತಿರುತ್ತದೆ. ಅದು ಬೇಕು, ಇದು ಬೇಕು ಎಂದು ರಚ್ಚೆ ಹಿಡಿಯುತ್ತದೆ. 'ಬೇಕು ಬೇಕದು ಬೇಕು, ಬೇಕಿದೆನಗಿನ್ನೊಂದು' ಎಂದು ಹಠ ಮಾಡುತ್ತದೆ. ಅಂತಹ ಹಠಮಾರಿ ಮನಸ್ಸನ್ನು ನಿಯಂತ್ರಿಸುವ ಬಗೆ ಹೇಗೆ ಎಂಬುದನ್ನು ಡಿ.ವಿ.ಜಿ.ಯವರು ಮನೋಹರವಾಗಿ ಚಿತ್ರಿಸಿದ್ದಾರೆ.

ಮನವನಾಳ್ವುದು ಹಠದ ಮಗುವನಾಳುವ ನಯದೆ।
ಇನಿತಿನಿತು ಸವಿಯುಣಿಸು ಸವಿಕಥೆಗಳಿಂದೆ॥
ಅನುಕೂಲಿಸದು ಬರಿಯ ಕೂಗು ಬಡಿತಗಳಿನದು ।
ಇನಿತಿತ್ತು ಮರಸಿನಿತ – ಮಂಕುತಿಮ್ಮ ॥

ಹಠಮಾರಿ ಮಗುವನ್ನು ಜಾಣ್ಮೆಯಿಂದ ತಾಯಿ ಸಂಭಾಳಿಸುವಂತೆ ಮನಸ್ಸನ್ನು ಸಂಬಾಳಿಸಬೇಕು. ತಿಂಡಿ ಬೇಕು ಎಂದು ಮಗು ರಚ್ಚೆ ಹಿಡಿದು ಅಳುತ್ತಿದ್ದರೆ, ತಿಂಡಿಯನ್ನು ಕೊಡುವವರೆಗೆ ಅದು ಅಳುವನ್ನು ನಿಲ್ಲಿಸುವುದಿಲ್ಲ. ಬರಿಯ ಕೂಗು, ಬಡಿತಗಳಿಗೆ ಅದು ಬಗ್ಗುವುದಿಲ್ಲ. ಆಗ ತಾಯಿಯಾದವಳು ತಿಂಡಿಯನ್ನು ಸ್ವಲ್ಪ ಮಗುವಿನ ಕೈಗಿತ್ತು, ಕಾಗಕ್ಕ–ಗುಬ್ಬಕ್ಕನ ಕಥೆಯನ್ನು ಹೇಳುತ್ತಾ, ಚಂದಮಾಮನನ್ನು ತೋರುತ್ತಾ, ಮಗುವನ್ನು ರಮಿಸಿ, ಅದರ ಗಮನವನ್ನು ಬೇರೆಡೆಗೆ ಸೆಳೆದು, ಅದು ಹಠವನ್ನು ಮರೆಯುವಂತೆ ಮಾಡುತ್ತಾಳೆ. ಅದೇ ರೀತಿಯಲ್ಲಿ ಮನದ ಆಸೆಗಳನ್ನೆಲ್ಲ ಹಠಯೋಗದಿಂದ ತಿರಸ್ಕರಿಸದೆ, ಇತಿಮಿತಿಯಲ್ಲಿ ಅವುಗಳನ್ನು ಪೂರೈಸುತ್ತಾ, ಉಳಿದಂತೆ ಮನದ ಗಮನವನ್ನು ಉಪಾಯದಿಂದ ಬೇರೆಡೆಗೆ ತಿರುಗಿಸಬೇಕು. ಇದೇ ಮನವನ್ನು ಆಳುವ ಉಪಾಯ ಎಂದು ತಿಮ್ಮಗುರು ಬೋಧಿಸಿದ್ದಾರೆ. ವಾಸ್ತವದ ನೆಲೆಗಟ್ಟಿನಲ್ಲಿಯೇ ಪರಿಹಾರವನ್ನು ಹುಡುಕುವ ತಿಮ್ಮಗುರು ಸಾಧಕರನ್ನೆಂದೂ ದಿಗಿಲುಗೊಳಿಸುವುದಿಲ್ಲ.

ಜೀವನದಲ್ಲಿ ಯಶಸ್ಸನ್ನು ಕಾಣಬೇಕಾದರೆ ಮೊದಲ ಹೆಜ್ಜೆಯಾಗಿ ಸರಿಯಾದ ಗುರಿಯನ್ನು ನಿರ್ಧರಿಸಿಕೊಳ್ಳಬೇಕು. 'ಗುರಿಯಿಲ್ಲದ ಪಯಣ ಗರಿಯಿಲ್ಲದ ಹಕ್ಕಿಯಂತೆ, ಕುದುರೆಯಿಲ್ಲದ ಸಾರೋಟಿನಂತೆ' ಎಂಬುದು ಹಿರಿಯರ ನುಡಿ.

ಅದರಲ್ಲೂ ಮೇರುವಿನಷ್ಟು ಎತ್ತರದ ಗುರಿಯನ್ನಿಟ್ಟುಕೊಂಡೇ ಕಾರ್ಯಾರಂಭ ಮಾಡಬೇಕು. ಚಿಕ್ಕ ಗುರಿಯನ್ನಿಟ್ಟು ಕೊಳ್ಳುವುದೇ ದೊಡ್ಡ ಅಪರಾಧ' ಎಂಬ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರ ನುಡಿಗಳು ಇಲ್ಲಿ ನೆನೆಯಲು ಯೋಗ್ಯ ವಾಗಿವೆ. ಈ ತತ್ವವನ್ನು ತಿಮ್ಮಗುರು ಹೀಗೆ ಹಿಡಿದಿಟ್ಟಿದ್ದಾರೆ:

ಧಾರುಣಿಯ ನಡಿಗೆಯಲಿ ಮೇರುವಿನ ಗುರಿಯಿರಲಿ ।
ಮೇರುವನು ಮರೆತಂದೆ ನಾರಕಕೆ ದಾರಿ ॥
ದೂರವಾದೊಡದೇನು? ಕಾಲು ಕುಂಟಿರಲೇನು?।
ಊರ ನೆನಪೇ ಬಲವೋ – ಮಂಕುತಿಮ್ಮ ॥

ಮೇರುವಿನಷ್ಟು ಎತ್ತರದ ಗುರಿಯನ್ನು ಇಟ್ಟುಕೊಳ್ಳಬೇಕು. ಅಂತಹ ಉನ್ನತ ಗುರಿಯನ್ನು ಇಟ್ಟುಕೊಳ್ಳದಿರುವುದೇ ನಮ್ಮ ಸೋಲಿಗೆ ಕಾರಣ ಎನ್ನುವ ಕಗ್ಗದ ಕವಿ, ಕಾಯಾ ವಾಚಾ ಮನಸಾ ಆ ಗುರಿಯನ್ನು ನಮ್ಮದಾಗಿಸಿಕೊಂಡರೆ ಸಾಕು, ಭೀಮಬಲವೊಂದು ಆಂತರಿಕವಾಗಿ ಮನದೊಳಗೆ ಚೈತನ್ಯಗೊಳ್ಳುತ್ತದೆ; ಅದೇ ನಮ್ಮನ್ನು ಗುರಿಯೆಡೆಗೆ ಲೀಲಾಜಾಲವಾಗಿ ಕರೆದೊಯ್ಯುತ್ತದೆ ಎಂದು ಸಾರಿದ್ದಾರೆ. ಅನುಭವಜನ್ಯವಾದ ಈ ನುಡಿಗಳನ್ನು ಒರೆಗೆ ಹಚ್ಚಿದವರೆಲ್ಲರೂ ಯಶಸ್ವಿಯಾಗಿದ್ದಾರೆ ಎಂಬುದನ್ನು ನಾವಿಲ್ಲಿ ನೆನೆಯಬಹುದಾಗಿದೆ.

'ಆಸೆ ಆಗಸದಷ್ಟು, ಪ್ರಯತ್ನ ಸಾಸಿವೆಯಷ್ಟು' – ಹೀಗಿದ್ದರೆ ಆದೀತೇ? ದೊಡ್ಡಗುರಿಯ ಜೊತೆಗೆ ದೊಡ್ಡ ಪ್ರಮಾಣದ ಪ್ರಯತ್ನವೂ ಸೇರಲೇಬೇಕು. ಹಾಗೆ ನೋಡಿದರೆ ಜೀವನದ ಹೋರಾಟದಲ್ಲಿ ನಿರಂತರವಾದ ಮತ್ತು ಪ್ರಾಮಾಣಿಕವಾದ ಪ್ರಯತ್ನಗಳು ಮುಖ್ಯವೇ ಹೊರತು, ಸೋಲುಗೆಲುವುಗಳಲ್ಲ. ಆರಂಭದ ಸೋಲುಗಳು – ಅಸಲಿಗೆ ಅವುಗಳು ಸೋಲುಗಳಲ್ಲ; ಮುಂದಿನ ಬಹುದೊಡ್ಡ ವಿಜಯಕ್ಕೆ ಏರಿಸಬಲ್ಲ ಮೆಟ್ಟಿಲುಗಳು, ನಮ್ಮನ್ನು ಗಟ್ಟಿಗೊಳಿಸಬಲ್ಲ ಗರಡಿಯ ಪಟ್ಟುಗಳು ಎಂಬುದನ್ನು ಡಿ.ವಿ.ಜಿ.ಯವರು ಸುಂದರವಾದ ಉಪಮೆಯೊಂದಿಗೆ ಹೀಗೆ ಕಡೆದಿಟ್ಟಿದ್ದಾರೆ:

ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು।
ಪಟ್ಟು ವರಸೆಗಳೆಲ್ಲ ವಿಫಲವೆನ್ನುವೆಯೇಂ?॥
ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣಗಟ್ಟಿ ।
ಗಟ್ಟಿತನ ಗರಡಿಫಲ – ಮಂಕುತಿಮ್ಮ ॥

ಕುಸ್ತಿ ಪಂದ್ಯಾಟದಲ್ಲಿ ಗೆಲ್ಲಬೇಕೆಂಬ ಗುರಿಯೊಂದಿಗೆ ಪ್ರಯತ್ನಶೀಲನಾದ ಜಟ್ಟಿಯೊಬ್ಬ ಪಂದ್ಯದಲ್ಲಿ ಸೋತುಹೋದ ಎಂದಾದರೆ, ಆತನ ಎಲ್ಲ ಪ್ರಯತ್ನಗಳು – ಗರಡಿಯ ವ್ಯಾಯಾಮ, ಪಟ್ಟು, ವರಸೆಗಳೆಲ್ಲ ನಿರರ್ಥಕವೇ? ಆ ಯುವಕನ ಮೈಕಟ್ಟನ್ನು ಒಮ್ಮೆ ಮುಟ್ಟಿ ನೋಡಿ! ದಿನದಿನದ ವ್ಯಾಯಾಮದಿಂದ, ಅಂಗಸಾಧನೆಯಿಂದ ಅವನೀಗ ಉಕ್ಕಿನ ಮನುಷ್ಯನಾಗಿ ನಿಂತಿದ್ದಾನೆ. ಹಾಗಾದರೆ, ಸೋತುಹೋದನಲ್ಲ ಎಂಬ ಪ್ರಶ್ನೆ ಸಹಜವಾಗಿಯೇ ಮೂಡಬಹುದು. ಮುಂದೊಂದು ದಿನ ಗೆದ್ದಾನು! ಸೋಲೇ ಗೆಲುವಿನ ಸೋಪಾನ. ಆದರೆ ದಿನದಿನದ ಪ್ರಯತ್ನದ ಫಲವಾಗಿ ಆತನೀಗ ಜಟ್ಟಿಯಾಗಿದ್ದಾನೆ, ಗಟ್ಟಿಯಾಗಿದ್ದಾನೆ. ಜೀವನದ ಯಶಸ್ಸಿಗೆ ಬೇಕಾದದ್ದು ಆ ಗಟ್ಟಿತನವೇ ಹೊರತು ಸೋಲುಗೆಲುವುಗಳಲ್ಲ ಎಂಬುದನ್ನು ನಾವು ನೆನೆಪಿಟ್ಟುಕೊಳ್ಳಬೇಕು. ಇದೇ ತಿಮ್ಮಗುರುವಿನ ಸಂದೇಶ.

**'ಬದುಕು ಜಟಕಾ ಬಂಡಿ; ವಿಧಿಯದರ ಸಾಹೇಬ; ಕುದುರೆ ನೀನ್'** ಎಂತಲೂ, **'ವಿಧಿಯಗಸ ನೀಂ ಕತ್ತೆ'** ಎಂತಲೂ ತಮ್ಮ ಚೌಪದಿಗಳ ಮೂಲಕ ಘೋಷಿಸಿರುವ ಡಿ.ವಿ.ಜಿ.ಯವರು ನಮ್ಮ ಬದುಕನ್ನು ವಿಧಿ ತನಗೆ ಬೇಕಾದಂತೆ ನಿಯಂತ್ರಿಸುತ್ತದೆ ಎಂಬ ಸೂಚನೆಯನ್ನೂ ನೀಡಿದ್ದಾರೆ. ವಿಧಿಯ ಕೈಚಳಕವನ್ನು ವಿವರಿಸುವ ಹಲವು ಮುಕ್ತಕಗಳನ್ನು ಮಂಕುತಿಮ್ಮನ ಕಗ್ಗದಲ್ಲಿ ಕಾಣಬಹುದು. ಹಾಗೆಂದಮಾತ್ರಕ್ಕೆ ತಿಮ್ಮಗುರು ಸಂಪೂರ್ಣವಾಗಿ ವಿಧಿಗೆ ಶರಣಾಗಿದ್ದಾರೆ ಎಂಬುದೂ ಸರಿಯಲ್ಲ. ವಿಧಿಯ ಬಲ ಶಕ್ತಿಯುತವಾಗಿರುವುದಾದರೂ ಪುರುಷಪ್ರಯತ್ನದಿಂದ ಅದನ್ನು ಸ್ವಲ್ಪ ತಗ್ಗಿಸಬಹುದು ಎಂದು ಕೂಡ ಅವರು ಪ್ರತಿಪಾದಿಸಿದ್ದಾರೆ. ಅದನ್ನು ನಾವು ಗಮನಿಸಬೇಕು.

ಬದುಕೊಂದು ಕದನವೆಂದಂಜಿ ಬಿಟ್ಟೋಡುವನು।
ಬಿದಿಯ ಬಾಯಿಗೆ ಕವಳವಾಗದುಳಿಯುವನೇ?॥
ಎದೆಯನುಕ್ಕಾಗಿಸುತ, ಮತಿಗದೆಯ ಪಿಡಿದು ನೀನ್।
ಎದುರುನಿಲೆ ಬಿದಿಯೊಲಿವ –ಮಂಕುತಿಮ್ಮ ॥

ವಿಧಿ ಹೇಡಿಗಳನ್ನು ಅಟ್ಟಿಸಿ ನುಂಗುತ್ತಾನೆಯೇ ಹೊರತು ಧೈರ್ಯಶಾಲಿಗಳನ್ನಲ್ಲ. ಎದೆ ಗಟ್ಟಿಮಾಡಿಕೊಂಡು ದೇವರು ಕೊಟ್ಟ ಬುದ್ಧಿಶಕ್ತಿಯನ್ನು ಉಪಯೋಗಿಸಿಕೊಂಡು, ವಿಧಿಯನ್ನು ಎದುರಿಸಿದರೆ ಆತನೂ ಒಲಿಯುತ್ತಾನೆ ಎಂಬುದೇ ಇಲ್ಲಿನ ಭಾವಾರ್ಥ.

ಪುರುಷ ಸ್ವತಂತ್ರನೋ? ದೈವವಿಧಿ ಪರವಶನೋ? ।
ಎರಡುಮನಿತಿನಿತುಳ್ಳ ತೋಳಿನಂತಿಹನೋ? ॥
ತಿರುಗುವುದು, ಮಡಿಸುವುದು, ತೋಳ್ ಮೈಕಟ್ಟಿನಲಿ ।
ನರನಂತು ಮಿತಶಕ್ತ – ಮಂಕುತಿಮ್ಮ ॥

ಮನುಷ್ಯ ಪೂರ್ಣ ಸ್ವತಂತ್ರನೋ? ಅಥವಾ ದೈವವೇ ಆತನ ಜನ್ಮಾಂತರದ ವಾಸನೆಗಳಿಗೆ ಅನುಗುಣವಾಗಿ ಆತನ ಮನಸ್ಸು, ಬುದ್ಧಿಗಳನ್ನು ತಿರುಚಿ ನಿಯಂತ್ರಿಸುವುದೋ? ಅಥವಾ ಆತನ ಸ್ವತಂತ್ರ ಪ್ರವೃತ್ತಿ ಮತ್ತು ದೈವಪ್ರೇರಣೆ – ಇವೆರಡರ ಸಹಯೋಗದಲ್ಲಿ ಆತ ವರ್ತಿಸುತ್ತಾನೋ ಎಂಬ ಪ್ರಶ್ನೆಗಳನ್ನು ಮುಂದಿಡುವ ತಿಮ್ಮಗುರು, ನಮ್ಮ ತೋಳಿನ ರೂಪಕದ ಮೂಲಕ ಅದಕ್ಕೆ ಸಮಂಜಸವಾದ ಉತ್ತರ ನೀಡಿದ್ದಾರೆ. ತೋಳನ್ನು ನಮ್ಮ ಇಚ್ಛಾನುಸಾರ ಹೇಗೆ ಬೇಕಾದರೂ ತಿರುಗಿಸಬಹುದು. ಆದರೆ ದೇಹಕ್ಕೆ ಅಂಟಿರುವ ತೋಳನ್ನು ಈಚೆಗೆ ಕಿತ್ತು ಇಡುವುದಕ್ಕೆ ಸಾಧ್ಯವಿಲ್ಲ. ಇದು ನರನಿಗಿರುವ 'ಸ್ವಾತಂತ್ರ್ಯ' ಮತ್ತು 'ಬಂಧನ' ಎರಡನ್ನೂ ಪ್ರತಿನಿಧಿಸುತ್ತದೆ; ಪುರುಷ ಸ್ವಾತಂತ್ರ್ಯ ಮತ್ತು ವಿಧಿಯ ಬಲ – ಇವೆರಡರ ಸಹಯೋಗ ಮತ್ತು ಸಾಮರಸ್ಯವನ್ನು ಅದು ನಿರೂಪಿಸುತ್ತದೆ. ಈ ಹಿನ್ನೆಲೆಯಲ್ಲಿ ತಿಮ್ಮಗುರುವಿನ ಮತ್ತೊಂದು ಮುಕ್ತಕದ ಸಾರ ನಮಗೆ ಅನುಕರಣೀಯವಾಗಿದೆ.

ನಿನ್ನ ಹೆಗಲಿನ ಹೊರೆಯ ದೈವಭುಜಕೇರಿಸುವ ।
ಸನ್ನಾಹ ಸಾಗೀತೆ? ದೈವ ಒಪ್ಪೀತೇ?
ಮನ್ನಿಸಲಿ ವಿಧಿ ನಿನ್ನ ಬೇಡಿಕೆಯ, ಭಿನ್ನಿಸಲಿ ।
ನಿನ್ನ ಬಲವನು ಮೆರೆಸೊ – ಮಂಕುತಿಮ್ಮ ॥

ಎಲ್ಲವೂ ವಿಧಿಯ ಇಚ್ಛೆಯಂತೆ ತಾನೇ ಆಗುವುದು ಎಂಬ ಒಣ ವಿರಕ್ತಿಯನ್ನೂ, ಅಗ್ಗದ ವೈರಾಗ್ಯವನ್ನೂ ತಾಳಿ ಯಾವ ಪ್ರಯತ್ನಕ್ಕೂ ಮನಸ್ಸು ಮಾಡದೆ, ಎಲ್ಲಾ ಭಾರವನ್ನೂ ದೇವರಿಗೊಪ್ಪಿಸಿ ಕೈಕಟ್ಟಿ ಕುಳಿತುಕೊಳ್ಳುವವರನ್ನು ಸ್ವತಃ ದೇವರು ಕೂಡಾ ಒಪ್ಪಿಕೊಳ್ಳುವುದಿಲ್ಲ. ಆತನು ನಮಗೆ ನೀಡಿದ ದೇಹಬಲ, ಬುದ್ಧಿಬಲ ಎಲ್ಲವನ್ನೂ ಪಣಕ್ಕಿಟ್ಟು ಪುರುಷಪ್ರಯತ್ನವನ್ನು ಮೆರೆಯಬೇಕು. ಆಗ ಅದಕ್ಕೆ ದೈವಸಹಾಯ ಒದಗಿ ಬರುತ್ತದೆಯೇ ಹೊರತು, ಬರಿಯ ಪ್ರಾರ್ಥನೆಗೆ ದೇವರು ಒಲಿಯಲಾರ. ಬೇಸಿಗೆಯಲ್ಲಿ ಜೀವಜಲವಾದ ನೀರು ದುರ್ಲಭವಾದಾಗ ಮನುಷ್ಯನಾದವನು ಆಳವಾದ ಬಾವಿಯನ್ನು ತೋಡಿಯಾದರೂ ನೀರನ್ನು ಪಡೆಯಲು ಮುಂದಾಗುತ್ತಾನೆ. ಇಂತಹ ಪುರುಷಪ್ರಯತ್ನಕ್ಕೆ ದೈವಸಹಾಯವೂ ಒದಗಿ ಬರುತ್ತದೆ. ಇದನ್ನೇ ತಿಮ್ಮಗುರು 'ನಿನ್ನ ಬಲವನು ಮೆರೆಸೊ' ಎಂದು ಸಾರಿದ್ದಾರೆ. ಇದು ನಮಗೆಲ್ಲರಿಗೂ ದಾರಿದೀಪವಾಗಬೇಕು.

**'ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು; ಭಂಗಪಟ್ಟುಂಬ ಬಿಸಿ ಅನ್ನಕ್ಕಿಂತಲೂ ತಂಗಳವೇ ಲೇಸು'** ಎಂಬ ಸರ್ವಜ್ಞನ ನುಡಿಗಳು ತಿಮ್ಮಗುರುವಿಗೆ ಆಪ್ಯಾಯಮಾನ. ಆಧುನಿಕ ಸರ್ವಜ್ಞರೆಂದೇ ಖ್ಯಾತರಾದ ಡಿ.ವಿ.ಜಿಯವರು ಬಡತನದ ಬೆಂಕಿಯಲ್ಲಿ ನೊಂದುಬೆಂದರೂ ಕೊನೆ ಉಸಿರಿರುವವರೆಗೂ ಸ್ವಾಭಿಮಾನದಿಂದ ಬದುಕಿ ಬಾಳಿದವರು. ಅವರ ಜೀವನಸಂದೇಶವೇ ಈ ಮುಕ್ತಕದಲ್ಲಿ ಮಡುಗಟ್ಟಿರುವುದನ್ನು ನಾವು ಕಾಣಬಹುದು.

ರಾಗಿಮುದ್ದೆಯ ನುಂಗಿ ನಲಿದು ಬಾಳ್ವಾತಂಗೆ ।
ಕಾಗೆ ಕದ್ದುಣುವ ಭಕ್ಷ್ಯವ ಕಂಡು ಕರುಬೆ? ॥
ನೀಗುವುದು ಹಸಿವನ್; ಉಣಿಸೆಂತಪ್ಪುದಾದೊಡಂ।
ಬಾಗಿಸದಿರಾತ್ಮವನು – ಮಂಕುತಿಮ್ಮ ॥

ಸ್ವಾಭಿಮಾನದಿಂದ ಬದುಕುವಾತನಿಗೆ ಉದರದ ಬೆಂಕಿಯನ್ನು ತಣಿಸುವುದಕ್ಕೆ ರಾಗಿ ಅಂಬಲಿಯಾದರೂ ಸರಿ; ತಂಗಳನ್ನವಾದರೂ ಸರಿ. ಯಾರ ಮುಂದೂ ಆತ ಕೈ ಚಾಚಲಾರ, ತಲೆ ಬಗ್ಗಿಸಲಾರ. ತನ್ನ ಅಭಿಮಾನವನ್ನೇ ತೊರೆದು, ಇತರರ ಎಂಜಲಿಗೆ ಆಸೆಪಡುವ, ಇತರರ ಆಸ್ತಿ ಕಬಳಿಸಲು ಸಂಚು ನಡೆಸುವವನ ಬದುಕು ಭಂಡ ಬದುಕು ಎನ್ನುತ್ತಾರೆ ತಿಮ್ಮಗುರು. ಅದಲ್ಲದೆ, ಅದು, ಕಾಗೆ ಎಲ್ಲಿಂದಲೋ ಕದ್ದು ತಂದು ತಿನ್ನುತ್ತಿರುವ ಸಿಹಿ ತಿಂಡಿಗೆ ಮನುಷ್ಯನಾದವನು ಆಸೆಪಟ್ಟಂತೆಯೇ ಸರಿ ಎಂದು ತುಚ್ಛೀಕರಿಸಿದ್ದಾರೆ; ಆ ಮೂಲಕ ಆತ್ಮಾಭಿಮಾನದಿಂದ ಬದುಕಿ ಎಂಬ ಸಂದೇಶವನ್ನೂ ಕೊಟ್ಟಿದ್ದಾರೆ.

**'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ'** ಎಂದು ಭಗವದ್ಗೀತೆಯಲ್ಲಿ ಸಾರಿದ ಶ್ರೀಕೃಷ್ಣ, ವ್ಯಕ್ತಿಗಳ ಗುಣ ಮತ್ತು ಅವರ ಕರ್ಮಗಳಿಗೆ ಅನುಗುಣವಾಗಿ ತಾನು ಸಮಾಜವನ್ನು ನಾಲ್ಕು ವಿಭಾಗಗಳಾಗಿ ಮಾಡಿದ್ದೇನೆ ಎಂದು ಹೇಳಿದ್ದಾನೆ; ತನ್ಮೂಲಕ ಅಸಮಾನತೆ ಪ್ರಕೃತಿದತ್ತವಾದುದು ಎಂಬುದನ್ನು ಸಾರಿ ಹೇಳಿದ್ದಾನೆ.

ತಿಮ್ಮಗುರು ಈ ಗೀತಾಸಾರವನ್ನೇ 'ಕೈಯ ಐದು ಬೆರಳುಗಳು ಒಂದೇ ಸಮನಾಗಿಲ್ಲ' ಎಂಬ ಲೋಕೋಕ್ತಿಯ ಮೂಲಕವೇ ಒಂದು ಮನೋಹರವಾದ ಮುಕ್ತಕವಾಗಿ ಇಲ್ಲಿ ಎರಕಹೊಯ್ದಿದ್ದಾರೆ:

**ಬೆರಳುಗಳ ನೋಡುವುಗಳೊಂದರಂತೊಂದಿಲ್ಲ ।**
**ಕರಧರ್ಮಕುಚಿತವಾ ಹೆಚ್ಚು ಕಡಮೆಗಳು ॥**
**ಪುರುಳ ಪಿಡಿವುವೆ ಬೆರಳ್ಗಳೆಲ್ಲವೊಂದುದ್ದವಿರೆ? ।**
**ಸರಿಯಹುದು ಕಾರ್ಯದಲಿ – ಮಂಕುತಿಮ್ಮ ॥**

ಕೈಯ ಐದು ಬೆರಳುಗಳೂ ಒಂದೇ ಸಮನಾಗಿಲ್ಲ. ಆದರೆ ಅದರಿಂದ ಹಾನಿಯೇನೂ ಇಲ್ಲ, ಬದಲಿಗೆ ಅನುಕೂಲವೇ ಆಗಿದೆ ಎನ್ನುವ ತಿಮ್ಮಗುರು ವರ್ಣಾಶ್ರಮ ನೀತಿಯನ್ನು ಅದರ ಮೂಲಕಲ್ಪನೆಯಲ್ಲಿಯೇ ಅನುಸರಿಸುವುದಾದರೆ ಅದೊಂದು ವೈಜ್ಞಾನಿಕಪದ್ಧತಿಯಾಗಿದ್ದು, ವಾಸ್ತವತೆಗೆ ತುಂಬಾ ಹತ್ತಿರದ್ದಾಗಿದೆ ಎಂಬ ಸೂಚನೆಯನ್ನಿಲ್ಲಿ ನೀಡಿದ್ದಾರೆ. ತಮ್ಮ 'ಸಂಸ್ಕೃತಿ' ಎಂಬ ಕಿರುಹೊತ್ತಿಗೆಯಲ್ಲಿ ಅವರು ಅದನ್ನು ಹೀಗೆ ವಿವರಿಸಿದ್ದಾರೆ: "ಮನುಷ್ಯರ ಗುಣಶಕ್ತಿಗಳಲ್ಲಿ ನ್ಯೂನಾಧಿಕ್ಯಗಳು ಇರುವುದರಿಂದಲೇ ಅವರಿಗೆ ಅನ್ಯೋನ್ಯ ಅವಶ್ಯಕತೆ. ಅದರಿಂದಲೇ ಸಂಘ, ಸಮಾಜಗಳು. ಒಬ್ಬ ಮನುಷ್ಯನ ಜೀವನ ಪರಿಪೂರ್ಣತೆಗೆ ಬೇಕಾದ ಗುಣಶಕ್ತಿ ಸಂಪತ್ತುಗಳೆಲ್ಲ ಅವನಲ್ಲಿಯೇ ಸಂಪೂರ್ಣವಾಗಿದ್ದಲ್ಲಿ ಅವನಿಗೆ ಇನ್ನೊಬ್ಬನ ಅಪೇಕ್ಷೆ ಇರದು. ಮನುಷ್ಯರಲ್ಲಿ ಸ್ವಭಾವಗತವಾಗಿ ಬಂದಿರುವ ವರ್ಗವ್ಯತ್ಯಾಸ, ಜಾತಿವ್ಯತ್ಯಾಸಗಳು, ಸಮಾಜ ಸಂಘಟನೆಗೆ ಪ್ರೇರಕಗಳಾಗಿ ಜೀವವಿಕಸನಕ್ಕೆ ಸಾಧಕಗಳಾಗಿರುತ್ತವೆ. ಹೀಗೆ ಭೇದಗಳೂ ವ್ಯತ್ಯಾಸಗಳೂ ನಮಗೆ ಉಪಕಾರಿಗಳೂ ಆಗಬಲ್ಲವು. ಎಲ್ಲೆ ಮೀರಿದಾಗ ಮಾತ್ರ ಅವು ಅಪಕಾರಿಗಳಾಗುತ್ತವೆ. ಒಂದೇ ಆಕಳಿನಿಂದ ಹಾಲು ಸಗಣಿ ಎರಡೂ ಹೊರಡುತ್ತವೆ. ಹಾಲು ಮಾಡಬಲ್ಲದ್ದನ್ನು ಸಗಣಿ ಮಾಡಲಾರದು. ಸಗಣಿ ಮಾಡಬಲ್ಲ ಉಪಕಾರವನ್ನು ಹಾಲೂ ಮಾಡಲಾರದು. ಲೋಕದಲ್ಲಿ ಒಂದೊಂದು ಗುಣಕ್ಕೂ ಒಂದೊಂದು ಕೆಲಸವಿದೆ. ಲೋಕಜೀವನಕ್ಕೆ ಬೇಕಾದದ್ದು ಏಕೈಕ ಗುಣತೆಯಲ್ಲ; ಅನೇಕ ಗುಣ ಸಂಕ್ಷೋಭೆಯೂ ಅಲ್ಲ. ಅದು ವಿವಿಧ ಗುಣ ಸಾಮರಸ್ಯ". ಜಾತಿಯ ಹೆಸರಲ್ಲಿ, ಧರ್ಮದ ಹೆಸರಲ್ಲಿ, ವರ್ಗದ ಹೆಸರಲ್ಲಿ ಸಮಾಜವಿಂದು ಟಗರುಕಾಳಗದ ಅಂಗಣವಾಗಿದೆ. ಅದನ್ನು ಬಿಟ್ಟು ಪರಸ್ಪರ ಪ್ರೀತಿ ಗೌರವಗಳಿಂದ, ಸಹಕಾರ ಸಾಮರಸ್ಯದಿಂದ ಎಲ್ಲರೂ ಬಾಳುವುದಾದರೆ, ಅವರವರ ಕೆಲಸಕಾರ್ಯಗಳನ್ನು ಶ್ರದ್ಧಾಭಕ್ತಿಗಳಿಂದ ಮಾಡುವುದಾದರೆ ಸಮಾಜವು ರಾಮರಾಜ್ಯವಾಗುತ್ತದೆ. ಇದನ್ನು ನಾವೆಲ್ಲರೂ ಗ್ರಹಿಸಿಕೊಳ್ಳಬೇಕಾಗಿದೆ.

**'ಪರೋಪಕಾರಾರ್ಥಮ್ ಇದಂ ಶರೀರಂ'** – ಪರೋಪಕಾರ ಮಾಡುವುದಕ್ಕಾಗಿಯೇ ಭಗವಂತ ನಮಗೆ ಈ ಮನುಷ್ಯ ಶರೀರವನ್ನು ನೀಡಿದ್ದಾನಂತೆ. ಇದನ್ನು ಅರಿತುಕೊಂಡು, ಬದುಕಿರುವಾಗ ನಾಲ್ಕುಮಂದಿಗೆ ಉಪಕಾರ ಮಾಡಿ ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು. ಹೇಗೂ ಉಸಿರು ನಿಂತ ತಕ್ಷಣವೇ ಮಾನವಶರೀರ ಅತ್ಯಂತ ನಿರುಪಯೋಗಿ ವಸ್ತುವಾಗಿಬಿಡುತ್ತದೆ. ಈ ಸಂದೇಶವನ್ನು ತಿಮ್ಮಗುರು ಅತ್ಯಂತ ಮನೋಜ್ಞವಾಗಿ ಮುಕ್ತಕವೊಂದರಲ್ಲಿ ಹೀಗೆ ಹಿಡಿದಿಟ್ಟಿದ್ದಾರೆ:

**ಮನೆಯ ಮಾಳಿಗೆಗಲ್ಲ, ಮುಡಿಯ ಕೊಪ್ಪಿಗೆಗಲ್ಲ ।**
**ಇನಿವಣ್ಣು ತನಿಯ ಕಾಳೆಂಬುದೇನಿಲ್ಲ ॥**
**ಬಣಗು ಕುರುಚಲು ಗಿಡದ ಬಾಳೇನು? ನೀನಂತು ।**
**ಒಣಗಿದೊಡೆ ಸೌದೆ ಸರಿ – ಮಂಕುತಿಮ್ಮ ॥**

ಮರವೊಂದು ಸತ್ತುಬಿದ್ದರೆ ಮನೆಯ ಮಾಳಿಗೆಗೆ ಹಲಗೆಯಾದೀತು, ಹೂವಾದರೆ ತುರುಬಿಗೆ ಮುಡಿದುಕೊಳ್ಳಬಹುದು, ಹಣ್ಣಾದರೆ ಅದರ ರಸದ ರುಚಿ ಸವಿಯಬಹುದು, ಕಾಳುಕಟ್ಟುವ ಗಿಡವಾದರೆ ಕಾಳುಗಳು ಹೊಟ್ಟೆಯ ಹಸಿವನ್ನು ನೀಗಿಸುತ್ತವೆ. ಆದರೆ ಮನುಷ್ಯ ಸತ್ತುಹೋದರೆ ಅದು ನಿರುಪಯೋಗಿ ಹೆಣ. ಕುರುಚಲು ಗಿಡದಂತೆ – ಒಣಗಿದರೆ ಸೌದೆಯಂತೆ ಸುಡಲಷ್ಟೇ ಯೋಗ್ಯವಾದುದು. ಜೈನಮುನಿ ತರುಣಸಾಗರ್ ಅವರು ಹೇಳುವಂತೆ, "ಮಾನವ ಶರೀರದ ಸ್ಥಾನಮಾನ ಒಂದು ಹಿಡಿ ಬೂದಿಗಿಂತ ಹೆಚ್ಚೇನಿಲ್ಲ; ಚಿತೆಯೇರಿದ ಒಂದು ಗಂಟೆಯ ಒಳಗೆ ಎಲ್ಲವೂ ಸ್ವಾಹಾ." ಬಸವಣ್ಣನವರ ವಚನವೊಂದು ಇಲ್ಲಿ ಪ್ರಸ್ತುತವಾಗಿದ್ದು ನೆನೆಯಲು ಯೋಗ್ಯವಾಗಿದೆ.

**ವ್ಯಾಧನೊಂದು ಮೊಲವ ತಂದೊಡೆ ಸಲುವ ಹಾಗಕ್ಕೆ ಬೆಲೆಗೈವರಯ್ಯ**
**ನೆಲನಾಳ್ವನ ಹೆಣನೆಂದೊಡೆ ಒಂದಡಿಕೆಗೆ ಕೊಂಬುವರಿಲ್ಲ ನೋಡಯ್ಯ**
**ಮೊಲನಿಗಿಂತ ಕರಕಷ್ಟ ನರರ ಬಾಳುವೆ**
**ಸಲೆ ನಂಬೊ ನಮ್ಮ ಕೂಡಲಸಂಗಮದೇವನ**

ಸತ್ತ ಮೊಲಕ್ಕಿದ್ದ ಬೆಲೆ ಕೂಡ ರಾಜನ ಹೆಣಕ್ಕಿಲ್ಲ; ಇದೇ ಮನುಜ ಶರೀರದ ದೌರ್ಭಾಗ್ಯ. ಆದ್ದರಿಂದ ಬದುಕಿರುವಾಗಲೇ ಸತ್ಕಾರ್ಯಗಳನ್ನು, ಪರೋಪಕಾರವನ್ನು ಮಾಡಿ ಕೃತಾರ್ಥರಾಗಬೇಕು. ಅದೇ ತಿಮ್ಮಗುರುವಿನ ಉಪದೇಶ.